ಹಿಡಿದು ಮನೆಗೆ ಹೊರಟ ಸೀತೆ ಒಬ್ಬಳನ್ನೇ ಕಳಿಸಲು ಇಚ್ಛಿಸದ ಲಕ್ಷ್ಮಣ ಬೇಡ ಇರು, ನಾನು ಡ್ರಾಪ್ ಮಾಡಿ ಬರ್ತೀನಿ ಎಂದು ತಾನೇ ಹೋಗಿ ಬಿಟ್ಟು ಬಂದ. ದಾರಿಯಲ್ಲಿ ತಮ್ಮ ತಮ್ಮ ಬದುಕು, ವ್ಯವಸಾಯ, ಮಕ್ಕಳು, ಬದುಕಿನ ಮುಂದಿನ ಯೋಜನೆಗಳು ಇತ್ಯಾದಿಯಾಗಿ ಹರಟಿದ್ದರು. ಅವಳ ಗಂಡನ ಬಗ್ಗೆ ಪ್ರಶ್ನೆ ಕೇಳಿ ಅವಳನ್ನು ನೋಯಿಸ ಬಯಸಲಿಲ್ಲ. ಮೊದಲು ಲವಲವಿಕೆಯ, ಉತ್ಸಾಹದ ಚಿಲುಮೆಯಾದ ಸೀತೆ ಈಗ ಒಳಗೊಳಗೇ ಅಂತರ್ಮುಖಿಯಾಗಿದ್ದುದು ಲಕ್ಷ್ಮಣ ಗ್ರಹಿಸಿದ. ಆದರೆ ಬಾಯಿಬಿಟ್ಟು ಕೇಳಲಿಲ್ಲ.

ಅಂದಿನಿಂದ ಬೆಂಗಾಡಿನಲ್ಲಿ ತನ್ನವರು, ಸುಖ ದುಃಖ ಕೇಳೋರು ಅನ್ನೋ ಒಂದೇ ಒಂದು ಜೀವವಿಲ್ಲದ ಸೀತೆಗೆ ಲಕ್ಷ್ಮಣನದೇ ಕಾವಲು, ಸಾರಥ್ಯ, ಸಖ್ಯ, ನೆರವು ದೊರೆಯತೊಡಗಿತು. ಎಲ್ಲಾದರೂ ಹೋಗುವುದಿದ್ದರೆ ಮೊದಲೇ ಸೀತೆ ಮುಂದಿನವಾರ ಅಲ್ಲಿಗೆ ಹೋಗಬೇಕು, 'ಕರ್ಕೊಂಡು ಹೋಗ್ತಿಯೇನೋ?' ಎನ್ನುತ್ತಾಳೆ. ಅವನೂ ಆ ರೀತಿ ತನ್ನ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಾನೆ; ಅವಳ ಅನುಕೂಲಕ್ಕೆ ತಕ್ಕಂತೆ.

'ಈ ವರ್ಷ ದೀಪಾವಳಿಗೆ ಏನಾದರೂ ನಿಂಗಿಷ್ಟವಾದದ್ದು ತಗೋ ಸೀತಾ, ನಾನು ಕೊಡಸ್ತೀನಿ' ಎಂದಾಗ ಸೀತೆಗೆ ಗಂಟಲುಬ್ಬಿ ಬಂದಿತು. 'ಬೇಡಾ ಕಣೋ ನಂಗೆಲ್ಲಾ ಇದೆ. ಏನೂ ಬೇಡಾ. ವಿಶ್ ಮಾಡು ಸಾಕು' ಅಂದರೂ ಬಿಡದೇ ಲಕ್ಷ್ಮಣ ದೀಪಾವಳಿಗೆ ಎರಡು ದಿನ ಇದ್ದಾಗಲೇ ಒಂದು ಸಂಜೆ ಅವಳನ್ನು ಕರೆದುಕೊಂಡು ಹೋಗಿ ನಲ್ಲಿಯಲ್ಲಿ ರೇಶಿಮೆ ಸೀರೆ, ಬೆಂಗಾಲ್ ಸ್ವೀಟ್ಸ್‌ನಲ್ಲಿ ಮಕ್ಕಳಿಗೆ ಸಿಹಿಕೊಡಿಸಿಕೊಂಡು ಬಂದು ಕಾರಿನಲ್ಲಿ ಕೂತಾಗ ಸೀತೆ ಮಾತಿಲ್ಲದೇ ಸುಮ್ಮನೇ ಅಳುತ್ತಿದ್ದಳು. ಭಾವುಕತೆಯಲ್ಲಿ ಮಾತನಾಡುವುದೂ ಕಷ್ಟವಾಗಿ ಹೋಯಿತು. ಅವನು ಏನೂ ಕೇಳದೆ ಸುಮ್ಮನೇ ಗಾಡಿ ನಡೆಸುತ್ತಿದ್ದ. ಕೆಲವೊಮ್ಮೆ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಲು ಮಾತಿನ ಅವಶ್ಯಕತೆಯೇ ಇರುವುದಿಲ್ಲ. ಅದನ್ನು ಮನಸ್ಸು ಅರಿಯುತ್ತದೆ, ಹೃದಯ ಗ್ರಹಿಸುತ್ತದೆ ಅಷ್ಟೇ!

ಈಗೀಗ ಲಕ್ಷ್ಮಣ ಕರೆದಾಗೆಲ್ಲ ಬರುತ್ತಾನೆ, ಆಫೀಸಿನಲ್ಲಿ ಎದ್ದು ಬರಲಾರದ ಮೀಟಿಂಗ್‌ಳಿದ್ದಾಗ ಹೇಗಾದ್ರೂ ನಾಳೆಯಾದರೂ ಹೋಗಿ ಸೀತೆಯನ್ನು ಕಾಣುವ ನೆಪಗಳನ್ನು ಹುಡುಕುತ್ತಾನೆ. ಇಬ್ಬರೂ ಕಾಫಿಹೌಸಲ್ಲಿ ಕೂತು ಹರಟುತ್ತಾರೆ. ತಮ್ಮ ತಮ್ಮ ಬದುಕಿನ ಬಗ್ಗೆ, ಆಫೀಸಿನ ರಾಜಕೀಯದ ಬಗ್ಗೆ, ಚುನಾವಣೆ ಬಗ್ಗೆ. ಅವಳ ಇಷ್ಟದ ಐಸ್‌ಕ್ರೀಮ್ ತರಿಸಿ ತಿನ್ನುವಾಗೆಲ್ಲ ತಾನೇ ಒಂದು ಸ್ಪೂನ್ ತಿನ್ನಿಸುತ್ತಾನೆ. 'ಬೇಡ ನಾನೇನು ಮಗೂನಾ?' ಎನ್ನುತ್ತಲೆ ಬಾಯಿ ತೆರೆಯುತ್ತಾಳೆ. ಇಷ್ಟೆಲ್ಲಾ ಯಾಕೆ ಇವ ನನಗೋಸ್ಕರ ಮಾಡ್ತಾನೆ? ಇದೇನು ಪ್ರೀತಿಯೇ? ಅನುಕಂಪವೇ? ಅಂತಲೂ ಪ್ರಶ್ನೆಗಳೇಳುತ್ತವೆ. ಆದರೆ ಕೇಳಿ ಅವನನ್ನು ದೂರಮಾಡಿಕೊಳ್ಳುವ ಮನಸ್ಸಿಲ್ಲ. ತಾನು ಓದಿದ ಪುಸ್ತಕಗಳ ಬಗ್ಗೆ ಸೀತೆ ಮಾತನಾಡುತ್ತಾಳೆ. ಮಿನುಗುತಾರೆ ಕಲ್ಪನಾಳ ಜೀವನಗಾಥೆ ಓದಿದ ಎಷ್ಟೋ ದಿನಗಳವರೆಗೂ ಅದೇ ಗುಂಗಿನಲ್ಲಿ ಒದ್ದಾಡುತ್ತಿದ್ದು, ಅವಳ ದಾರುಣ ಆತ್ಮಹತ್ಯೆಯೇ ಪದೇ ಪದೇ ನೆನಪಾಗುತ್ತಿತ್ತು. ಚಿತ್ರಪಟದಂತೆ ಕಣ್ಣೆದುರು ಸುಳಿಯುತ್ತಿತ್ತು. ಒಂದಿನ ಲಕ್ಷ್ಮಣನಿಗೂ ಅದೇ ಕಥೆ ಹೇಳಿದಾಗ. ಅವನು ನಕ್ಕುಬಿಟ್ಟ. ಅವಳಿಗೂ ಸಾಕಷ್ಟು ಅಹಂಕಾರವಿತ್ತು ತನ್ನ ಬಗ್ಗೆ. 'ಅದನ್ನೆಲ್ಲಾ ಓದಿ ಮನಸ್ಸಿಗೆ ಹಚ್ಚಿಕೋ ಬಾರದು. ಮರೆತುಬಿಡಬೇಕು' ಎನ್ನುವಾಗ ಅವನನ್ನೆ ದಿಟ್ಟಿಸುತ್ತಿದ್ದಳು ಸೀತೆ.

'ಸೀತಾ ನೀನು ವಿದ್ಯಾವಂತೆ, ಇಷ್ಟು ದೊಡ್ಡ ಊರಿನಲ್ಲಿ ದುಡಿಯುತ್ತಿದ್ದಿ. ನೀನ್ಯಾಕೆ ಇಷ್ಟು ತಾಪವನ್ನು, ಅಪವಾನವನ್ನು ಸಹಿಸಿಕೊಂಡಿರುತ್ತಿ. ನಾನಾಗಿದ್ದರೆ ನಿನ್ನನ್ನು ಈ ಜುಜುಬಿ ಕೆಲಸಕ್ಕೂ